† ಶ್ರೀ ಎಂ. ವೀರಪ್ಪಮೊಯಿಲ.—ನನಗೆ ತಿಳಿದಿರುವಂತೆ ಹೊಸನಗರ ತಾಲ್ಲೂಕಿನಲ್ಲಿ ಕೊಡಚಾದ್ರಿ ಕಡೆಗಳಲ್ಲಿ ಕೆಲಸವಾಗಿದೆ. ಇದನ್ನು ಮೈನೂರು ಮಿನರಲ್ಸ್ ಕಂ. ಲಿಮಿಟೆಡ್‌ನವರು ಮಾಡಿದ್ದಾರೆ. ಆದರೆ ಮೈನ್ಸ್ ಅಂಡ್ ಜಿಯಾಲಜಿ ವಿಭಾಗದವರು ಯಾವ ಕೆಲಸವನ್ನೂ ಮಾಡಿಲ್ಲ. ಇದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.—ಸ್ವಾಮಿ, ಹೊಸನಗರ ತಾಲ್ಲೂಕಿನಲ್ಲಿ ಕೊಡಚಾದ್ರಿ ಇದೆ, ಅಲ್ಲಿ ಕಬ್ಬಿಣದ ಅದುರು ಮತ್ತು ಮ್ಯಾಂಗನೀಸ್ ಸಿಕ್ಕುತ್ತದೆ, ಇದನ್ನು ತೆಗೆಸುವ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದಿರಾ? ಒಂದು ವೇಳೆ ತೆಗೆದುಕೊಂಡಿಲ್ಲದಿದ್ದರೆ ಮುಂದೆ ಕ್ರಮ ತೆಗೆದುಕೊಳ್ಳುತ್ತಿರಾ?

ಶ್ರೀ ಎಂ ವೀರಪ್ಪ ಮೊಯಿಲ.—ಇದನ್ನು ಪರಿಶೀಲಿಸಿ ಡೀಟೈಲ್ಸ್ ಆಫ್ ಇನ್‌ವೆಸ್ಟಿಗೇಷನ್‌ನ್ನು ಟೇಬರ್ ಮೇಲೆ ಇಡುತ್ತೇವೆ.

## Krishna Water Disputes

237. SRI S. M. SHEERNALY CHADRASHEKAR (Hosanagar).—Will the Chief Minister be pleased to state :—

(*a*) what is the outcome of the decision of the Krishna Water Dispute ;

(*b*) whether any award has been passed by the Commission with regard to Krishna Water Dispute ;

(*c*) if so, whether it is beneficial to the State ;

(*d*) are there any difficulties to start Upper Tunga Project now ;

(*e*) when the Government intend to take up the work of Upper Tunga Project?

SRI D. DEVARAJ URS (Chief Minister) —

(*a*) The Krishna Water Disputes Tribunal has given its further report containing the Final Orders of the Tribunal on 27th May 1976. The orders of the Tribunal have been published by Government of India on 31st May 1976 in the Gazette. According to the Final Orders of the Tribunal, the State of Karnataka is entitled to the following :—

(i) 700 TMC. out of the 75 per cent dependable flow of 2060 TMC.

(ii) About 34 TMC. out of regeneration water.

(iii) 50 per cent of the surplus flows over and above the 75 per cent dependable flows, as and when the Krishna Valley Authority is constituted.

(iv) The limit of Utilisation in Tungabhadra Sub-basin has been enhanced to 320 TMC. as against the earlier 295 TMC, and the utilisation in Vedavathi (K-9) Sub-basin has been restricted to 42 TMC.

(*b*) Yes.

(*c*) Yes.

(*d*) and (*e*) The scope of the project within the allocations is being examined. Investigations will be taken up after this is decided.

ಶ್ರೀ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್.—ಸ್ವಾಮಿ, ಇದು ಸಂತೋಷದ ಸಮಾಚಾರ. ಏನೆಂದರೆ ತುಂಗಭದ್ರಾ ಜಲಾನಯನದಲ್ಲಿ ಸುಮಾರು 320 ಟಿ ಎಂ.ಸಿ.ಎಫ್.ಟಿ ಅಷ್ಟು ನೀರಿನ ಪ್ರಮಾಣವನ್ನು ಹೆಚ್ಚಿಸರಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದೀರಿ. ಅಪ್ಪರ್ ತುಂಗ ಮತ್ತು ಅಪ್ಪರ್ ಕೃಷ್ಣ ಈ ಎರಡನ್ನೂ ಕೈಗೊಳ್ಳುವುದಕ್ಕೆ ಸಾಧ್ಯವೆ?

† ಶ್ರೀ ಡಿ. ದೇವರಾಜ ಅರಸ್.—ನವುಗೆ ಕೊಟ್ಟಿರುವ ನೀರನ್ನು ಈ ವ್ಯಾಲಿಯಲ್ಲಿ ಎಷ್ಟರೂ ಉಪಯೋಗಿಸಿಕೊಳ್ಳಬಹುದು. ತುಂಗಬಧ್ರಾ ಜಲಾನಯನದ ನೀರನ್ನು ಎರಡು ಬೆಳೆಗೂ ಉಪಯೋಗಿಸಿಕೊಳ್ಳಬಹುದು, ಮೂರಕ್ಕೂ ಉಪಯೋಗಿಸಿಕೊಳ್ಳಬಹುದು. ಮತ್ತು ಒಂದಕ್ಕೂ ಉಪಯೋಗಿಸಿಕೊಳ್ಳಬಹುದು.

ಶ್ರೀ ಎಸ್.ಎಂ. ಶೀರ್ವಾಳಿ ಚಂದ್ರಶೇಖರ್.—ಹಾಗಿದ್ದರೆ ಅಪ್ಪರ್ ತುಂಗಾ ಪಾಜೆಕ್ಟ್ ಬಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರೀ ಡಿ. ದೇವರಾಜ ಅರಸ್.—ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಕ್ಕಿಂತ ಮಾಡಬೇಕೆನ್ನುವುದು ನಕರ್ಾರದ ಪರಿಶೀಲನೆಯಲ್ಲದೆ.

ಶ್ರೀ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್.—ತಾವು ಪರಿಶೀಲನೆಯಲ್ಲದೆ ಎಂದು ಹೇಳಿದ್ದೀರಿ. ಅದಕ್ಕೆ ಇಂತಿಷ್ಟು ತಿಂಗಳಲ್ಲಿ ಆಗುತ್ತದೆಂದು ಹೇಳುವುದಕ್ಕೆ ಸಾಧ್ಯವೇ? ಈ ಪ್ರದೇಶದ ಜನರು ಬಹಳ ದಿವಸಗಳಿಂದಲೂ ನಿರೀಕ್ಷಿಸುತ್ತಿದ್ದಾರೆ. ಆ ದೃಷ್ಟಿಯಿಂದ ವಿಳಂಬವಿಲ್ಲದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಎಂದು ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಯಾವ ತಿಂಗಳು ನಿಗದಿ ಮಾಡಬೇಕೆಂದು ಕೇಳುತ್ತಿದ್ದೀರಿ.

I would like to inform the House that these are matters on which we cannot fix any date by which it could be completed. Because, this is a project which involves not lakhs of rupees but crores of rupees and we have to speed up the works which are on hand. For that also we have to find money. It is very easy for me to say that I will lay the foundation stone which will appear in the paper next day with big head lines. That is not the intention of the Government to leave everything there to the fate of the nature. That should not be the way in which the Government work should be done. We must find out what are the resources and feasibility etc., At one stage there was a fear of getting water for the project. But after the final award we are hopeful of utilising some more water. All these things are being studied. I cannot say at this stage that it would be completed within six months, or within one year etc., It depends upon so many factors.

ಶ್ರೀ ಕೋಣಂದೂರು ಲಿಂಗಪ್ಪ.—ತುಂಗಭದ್ರಾ ಮೇಲ್‌ದಂಡೆ ಯೋಜನೆಯು ಅಷ್ಟು ನಷ್ಟ ಯಾದುದಲ್ಲ, ಅದನ್ನು ಕೈಬಿಡಬೇಕೆಂದು ನಿರ್ಧಾರವಾಗಿರುವುದು ನಿಜವಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಈ ಯೋಜನೆಯನ್ನು ಕೈಬಿಡಬೇಕು ಎನ್ನುವುದು ನನಗೆ ಗೊತ್ತಿಲ್ಲ. ನೀರಿಲ್ಲವೆಂದು ಕೈಬಿಡಿ ಎಂದರೆ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಬಹುಶಃ ಆ ಒಂದು ಕಾಲಕ್ಕೆ ಕೈ ಬಿಡಬೇಕಾದಲ್ಲಿ 2-3 ಕಾರಣಗಳಿರುತ್ತವೆ. ಕೆಳಗಡೆ ಪ್ರಾಜೆಕ್ಟ್‌ಗಳು ಇದ್ದರೆ ಅವುಗಳಿಗೆ ನೀರು ಸಾಲದೆ ಹೋಗುವುದು ಒಂದು ಕಾರಣವಾದರೆ ಮುಳುಗಡೆ ಯಾಗಬಹುದಾದಂಥ ಪ್ರದೇಶಗಳು, ಇದನ್ನೆಲ್ಲ ನೋಡಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅರ್ಧ ಭಾಗವೇ ಮುಳುಗಡೆಯಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಅದನ್ನೂ ಗಮನಿಸಲಾಗುತ್ತದೆ ಎಷ್ಟರಮಟ್ಟಿಗೆ ಮುಳುಗಡೆ ಯಾಗುತ್ತದೆ, ಎಷ್ಟರಮಟ್ಟಿಗೆ ಉಳಿಸಬೇಕಾಗುತ್ತದೆ ಎಂಬುದೆಲ್ಲವನ್ನು ಪರಿಶೀಲಿಸುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ —ಈಗ ಮುಳುಗಡೆಯಾಗಿರುವುದೇ ಸಾಕು, ಮತ್ತಷ್ಟು ಮುಳುಗಡೆಗೆ ಅವಕಾಶ ಕೊಡಬೇಡಿ.

ಶ್ರೀ ಕೆ. ಎಫ್ ಪಾಟೀಲ್.—ತುಂಗಾ ಮತ್ತು ಮಾಲತಿನದಿಗಳ ಮೇಲ್‌ದಂಡೆಗೆ ಅಣೆ ಕಟ್ಟನ್ನು ಕಟ್ಟಿರಿನರ್‌ವಾಯರ್ ಮಾಡುವುದರಿಂದ ಗುರ್‌ಬರ್ಗಾದ ಕೆಲವು ಬಾಗಗಳಿಗೆ ಅಂದರೆ ಗಾಜನೂರು ಮುಂತಾದ ಕೆಲವು ಕೆಳಭಾಗದಲ್ಲಿರುವ ಕಡೆ ನೀರು ಹರಿಯುತ್ತದೆ. ಇದು ಅನುಕೂಲ ಕರವಾಗಿರುವುದರಿಂದ ಇದನ್ನು ಸರ್ಕಾರದವರು ತೀವ್ರವಾಗಿ ವಿಚಾರ ಮಾಡಿ ಪ್ಲಾನ್ ಮತ್ತು ಎಸ್ಟಿಮೇಟ್‌ಗಳನ್ನು ತಯಾರು ಮಾಡಿದರೆ ಒಳ್ಳೆಯದೆಂದು ನಾನು ಹೇಳುತ್ತೇನೆ.

ಶ್ರೀ ಎಂ ಎಸ್. ಕೃಷ್ಣಪ್ಪ.—ಕೃಷ್ಣಪ್ಪ ನೀರಿನ ತೀರ್ಮಾನವೇನಾಯ್ತು? ಟ್ರಿಬ್ಯುನರ್ ಕೊಟ್ಟಿರುವ ತೀರ್ಮಾನವೇ ಆಕ್ಟೈರ್ ತೀರ್ಮಾನವೆಂದು ತಿಳಿದುಕೊಳ್ಳಬೇಕೆ?.

ಶ್ರೀ ಡಿ. ದೇವರಾಜ ಅರಸ್.—ಅದು ಅಕ್ಟೈರ್ ತೀರ್ಮಾನವಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಶ್ರೀ ಕೆ ಎಫ್. ಪಾಟೀಲರು ಹೇಳಿದ್ದಕ್ಕೆ ಬದಲಾಗಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಇವೆರಡಕ್ಕೂ ಅನುಕೂಲವಾಗುವಂತೆ ತುಂಗಾ ಮತ್ತು ಶರಾವತಿ ನದಿಗಳನ್ನು ಸಂಗಮವಾಗುವಂತೆ ಮಾಡಿದರೆ ಕೆಳಗಡೆ ಇರುವವರಿಗೂ ಯಾರಿಗೂ ತೊಂದರೆ ಯಾಗುವುದಿಲ್ಲ. ಈ ಒಂದು ಯೋಜನೆಯನ್ನು ಕೈಗೊಳ್ಳುತ್ತೀರಾ ಸ್ವಾಮಿ.

ಶ್ರೀ ಡಿ. ದೇವರಾಜ ಅರಸ್.—ಸಂಗಮದ ಕೆಲಸ ಅಂದರೆ ಗಂಗಾ ಕಾವೇರಿ ಸಂಗಮ ಮಾಡಿದಹಾಗೆ ಎಂದು ಹೇಳುತ್ತೀರಾ? ಅದನ್ನು ನೋಡುತ್ತೇವೆ.

ಶ್ರೀ ವಿ. ಎ. ಪಾಯಿ.—ತುಂಗ ಪ್ರಾಜೆಕ್ಟ್ ಕಟ್ಟುವುದರಿಂದ ಬರಗಾಲಕ್ಕೆ ತುತ್ತಾಗಿರುವ ರಾಣೆಬೆನ್ನೂರು ಮತ್ತು ಬ್ಯಾಡಗಿ, ಶಿರಹಟ್ಟಿ ತಾಲ್ಲೂಕುಗಳಿಗೆ ನೀರಿನ ಅನುಕೂಲವಾಗಬಹುದು. ಆದ್ದರಿಂದ ಇದನ್ನು ಪರಿಶೀಲನೆ ಮಾಡುತ್ತೀರಾ?.

ಶ್ರೀ ಡಿ. ದೇವರಾಜ ಅರಸ್.—ತುಂಗಾ ನೀರನ್ನು ಕೊಪ್ಪಳ ತಾಲ್ಲೂಕಿಗೆ ತೆಗೆದುಕೊಂಡು ಹೋಗುವಾಗ ರಾಯಚೂರಿನ ಕೊಪ್ಪಳದವರಿಗೂ ತೆಗೆದುಕೊಂಡು ಹೋಗಬಹುದೆಂದು ಇಂಜಿನೀಯರ್ಸ್ ಹೇಳಿದ್ದಾರೆ. ಶಿರಹಟ್ಟಿಯಾದ ನಿಮ್ಮ ತಾಲ್ಲೂಕಿನ ಮೇಲೂ ಬರುತ್ತದೆ.

## Free Sites to ex-servicemen

297. SRI M. M SAJJAN (Muddebihal)—Will the Chief Minister be pleased to state :—

(*a*) the total number of Ex-servicemen in each district in the State as on 10th October 1976.

(*b*) whether Government has any proposal to grant sites free of cost to them as in the case of siteless people.